ವಾರದ ಪತ್ರ

## ಅದೇ ನವಿಲಗರಿ

ಈಚೆಗೆ ಪ್ರಸಾರವಾದ ಸ್ಟಾರ್ ಸುವರ್ಣದ 'ಬೊಂಬಾಟ್ ಭೋಜನ' ಕಾರ್ಯಕ್ರಮದಲ್ಲಿ ಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ಗೌರಿ ಸುಬ್ರಮಣ್ಯ ಅವರು ಹೇಳಿದ ಕೃಷ್ಣನ ನವಿಲುಗರಿಯ ಕಥೆ ಕಳೆದ ವರ್ಷದ ವಿಷಯವೇ ಪುನರಾವೃತ್ತಿಯಾಗಿದೆ. ನಿರೂಪಕರು ಶ್ರೀಕೃಷ್ಣನ ಹೊಸ ಹೊಸ ಕಥೆಗಳೊಂದಿಗೆ ನಮ್ಮನ್ನು ರಂಜಿಸಲಿ ಎನ್ನುವುದು ನಮ್ಮ ಆಶಯ.

—ಉಷಾ ಶ್ರೀಪಾದ, ಬನಶಂಕರಿ

## 'ಕೋಟಿ' ಕೋಟಿಗೆ ಸಮಾನ

ಕಲರ್ಸ್ ಕನ್ನಡದಲ್ಲಿ ಪ್ರಸಾರವಾದ ಪರಮ್ ನಿರ್ದೇಶನದ 'ಕೋಟಿ' ಅತ್ಯುತ್ತಮ ಸಿನಿಮಾ. ಕುಟುಂಬ ವರ್ಗದವರು ಒಟ್ಟಿಗೆ ಕುಳಿತು ನೋಡಬಹುದಾದ ಚಿತ್ರ. ಪ್ರಸ್ತುತ ಸಮಾಜದಲ್ಲಿ ನಡೆಯುವ ಘಾತುಕ ಶಕ್ತಿ ಕುರಿತ ಕಥಾವಸ್ತುವನ್ನು ಹೊಂದಿದೆ. 'ಕೋಟಿ' ಸಮಾಜಕ್ಕೆ ಒಳ್ಳೆಯ ಸಂದೇಶವನ್ನು ನೀಡಿದೆ. ಪಾತ್ರಧಾರಿಗಳ ಸಹಜ ಅಭಿನಯ, ಉತ್ತಮ ಸಂಭಾಷಣೆ, ಸನ್ನಿವೇಶ ಇವೆಲ್ಲವೂ ಕೋಟಿಗೆ ಸಮನಾಗಿಸಿದೆ.

—ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ




## ಸೀರೆ ಉಡುಗೊರೆ

ಕಲರ್ಸ್ ಕನ್ನಡ ಇತ್ತೀಚೆಗೆ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ. 'ನಿನಗಾಗಿ' ಆರಂಭವಾದ ಸಂದರ್ಭದಲ್ಲಿ ಧಾರಾವಾಹಿ ಆಧಾರಿತ ರಸಪ್ರಶ್ನೆ ಸ್ಪರ್ಧೆ ಮಾಡಿ ಮೇಕಪ್ ಬಾಕ್ಸ್ ಉಡುಗೊರೆ ಕೊಟ್ಟರು.

ಈಗ ಶ್ರಾವಣಮಾಸದ ವರಮಹಾಲಕ್ಷ್ಮಿ ಪೂಜೆ ಅಂಗವಾಗಿ 'ಸೀರೆ ಸುಗ್ಗಿ' ಸ್ಪರ್ಧೆಯನ್ನು ಏರ್ಪಡಿಸಿದ್ದರು. ಮಹಿಳೆಯರು ಮಾತ್ರ ನೋಡುತ್ತಾರೆಂದು ಭಾವಿಸಿ ಮಹಿಳೆಯರಿಗೆ ಉಡುಗೊರೆ ನೀಡುತ್ತಿರುವುದು ಬೇಸರದ ಸಂಗತಿ.

ಮಕ್ಕಳು, ಯುವಕರು, ಪುರುಷರು ಹಿರಿಯ ನಾಗರಿಕರೂ ವೀಕ್ಷಿಸುತ್ತಾರೆ. ಅದರಲ್ಲಿ ನಾನೂ ಒಬ್ಬ. ಯಾವುದೇ ಸ್ಪರ್ಧೆ ಏರ್ಪಡಿಸಿದರೂ ವಿಜೇತರಿಗೆ ನೀಡುವ ಬಹುಮಾನ ಮಕ್ಕಳು, ಯುವಕರು, ಪುರುಷರು, ಹಿರಿಯರಿಗೆ ಉಪಯೋಗಕ್ಕೆ ಬರುವಂತಿರಬೇಕು.

—ರಘುನಾಥರಾವ್ ತಾಪ್ಸೆ, ದಾವಣಗೆರೆ

## ಹಳಿ ತಪ್ಪಿದ ಹಳ್ಳಿ ಮಾತು

ಸಾಕಷ್ಟು ಧಾರಾವಾಹಿಗಳಲ್ಲಿ ಮಂಡ್ಯ ಭಾಗದ ಗ್ರಾಮೀಣ ಭಾಷೆಯ ಬಳಕೆಯನ್ನು ಕಾಣಬಹುದು. ಅದು ಸರಿ ಕೂಡ ಇರಬಹುದು. ವಿಚಿತ್ರ ಎಂದರೆ ಯಾವ ಪಾತ್ರವೂ ಪೂರ್ತಿಯಾಗಿ ಆ ಸೊಗಡನ್ನು ತಮ್ಮ ಮಾತಿನಲ್ಲಿ ಹೊರಹೊಮ್ಮಿಸುವುದಿಲ್ಲ. ಕೇವಲ ಕೆಲವು ಪದಗಳನ್ನು ಮಾತ್ರ ಬಳಸುತ್ತವೆ. ಅಂತೆಯೇ ರಾಜ್ಯದ ಬೇರೆ ಬೇರೆ ಪ್ರಾಂತ್ಯದ ಭಾಷೆಯನ್ನು ಬಳಸಿದರೆ ಚೆನ್ನಾಗಿರುತ್ತದೆ.

'ಪುಟ್ಟಕ್ಕನ ಮಕ್ಕಳು' ಅನುಸರಿಸಿ 'ಅಣ್ಣಯ್ಯ', 'ನನ್ನ ದೇವ್ರು', 'ಕರಿಮಣಿ' ಮೊದಲಾದ ಅರೆಬರೆ ಮಂಡ್ಯ ಭಾಗದ ಗ್ರಾಮ್ಯ ಭಾಷೆಯನ್ನು ಬಳಸುವ ಪಾತ್ರಗಳನ್ನು ಕಂಡಾಗ ನಿಜಕ್ಕೂ ಬೇಸರ ಅನ್ನಿಸುತ್ತದೆ. ಮಂಡ್ಯ ಭಾಷೆಯೇ ಇರಲಿ ಅಥವಾ ಬೇರೆ ಯಾವುದೇ ರೀತಿಯ ಪ್ರಾದೇಶಿಕ ಭಾಷೆಯನ್ನು ಸಮರ್ಪಕವಾಗಿ ಬಳಸಿದರೆ ಮಾತ್ರ ಗ್ರಾಮ್ಯ ಭಾಷೆಯ ಶ್ರೀಮಂತಿಕೆ ಗೊತ್ತಾದೀತು. ಅದು ಬಿಟ್ಟು ಅಲ್ಲೊಂದು ಇಲ್ಲೊಂದು ಪದ ಬಳಸಿದರೆ ಧಾರಾವಾಹಿಯ ಸತ್ವವೂ ಹೊರಟು ಹೋಗುತ್ತದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಋಣಾತ್ಮಕತೆಯಲ್ಲಿ ರೋಚಕತೆ

ನಮ್ಮ ಟೀವಿ ಸುದ್ದಿ ಮಾಧ್ಯಮಗಳಿಗೆ ಯಾವತ್ತೂ ಗುಣಾತ್ಮಕ ವಿಷಯಗಳೇ ಸಿಗುವುದಿಲ್ಲವೆನಿಸುತ್ತದೆ. ಇಡೀ ದಿನ ಅದೇ ರಾಗ ಅದೇ ಹಾಡು. ಈಗಂತೂ ಸಿನಿ ನಟರೊಬ್ಬರ ಕುರಿತ ವಿಷಯ ಬಿಟ್ಟರೆ ಬೇರೇನೂ ಇಲ್ಲ. ಇನ್ನು ಯಾವುದೇ ವಿಷಯವಾಗಲಿ ನಮದೇ ಎಕ್ಸ್‌ಕ್ಲೂಸಿವ್ ಅಂತಾರೆ. ಜೈಲುಗಳ ಒಳಗೆ ನಡೆಯುವ ಅಕ್ರಮಗಳು ಈಗಷ್ಟೇ ಆರಂಭ ಎನ್ನುವಂತೆ ಹೇಳುತ್ತಾರೆ. ಇವತ್ತು ಒಬ್ಬ ಮಾಜಿ ಕೈದಿಯೊಂದಿಗೆ ಜೈಲಿನ ಚಿತ್ರಣ. ಇದಾವ ರೀತಿಯ ಸುದ್ದಿ ಮಾಧ್ಯಮವೋ ತಿಳಿಯದು. ಇದಕ್ಕೆ ಯಾವಾಗ ಕಟ್ಟುನಿಟ್ಟಿನ ಸೆನ್ಸಾರ್ ಬರುತ್ತದೋ ?

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಮಕ್ಕಳ ಶೋಷಣೆ

ಧಾರಾವಾಹಿಗಳು ಮತ್ತು ರಿಯಾಲಿಟಿ ಶೋಗಳಲ್ಲಿ ಮಕ್ಕಳ ಬಳಕೆ ಅತಿಯಾಗಿದೆ. ಅದಕ್ಕೇನು ನಿರ್ಬಂಧ ಇಲ್ಲವೇ? ಡಾನ್ಸ್ ಶೋಗಳಲ್ಲಂತೂ ಸರ್ಕಸ್ ಕಲಾವಿದರಾಗಿ ಮಾಡುತ್ತಿದ್ದಾರೆ. ಈ ಬಗ್ಗೆ ಪೋಷಕರಿಗೂ ಜವಾಬ್ದಾರಿ ಇಲ್ಲ ಎಂದೆನಿಸುತ್ತಿದೆ.

—ಸೋಮೇಶ್ವರ ಕಿತ್ತಾನೆ

## ಚಂದದ ಸಂದರ್ಶನ

ರಂಗಕರ್ಮಿ ಪ್ರೇಮ ಬಾದಾಮಿ ಸಂದರ್ಶನ ತುಂಬ ಚೆನ್ನಾಗಿ ಮೂಡಿಬಂತು. ಅವರ ನಾಟಕದ ಕೆಲವು ದೃಶ್ಯಗಳನ್ನು ತೋರಿಸಿದ್ದು ಸಂತೋಷದ ವಿಷಯ. ಅವರು ಕವಯಿತ್ರಿ, ಅಂಕಣಕಾರ್ತಿ, ನಾಟಕಕಾರ್ತಿ ಎಂದು ತಿಳಿದು ಹೆಮ್ಮೆಯೆನಿಸಿತು. ಕೆಲವು ಸಿನಿಮಾ ಧಾರಾವಾಹಿಯಲ್ಲೂ ಅಭಿನಯ ಮಾಡಿರುವರು. ಇಂತಹ ಅಪರೂಪದ ಕಲಾವಿದರನ್ನು ಪರಿಚಯಿಸಿದ ಚಂದನವಾಹಿನಿಗೆ ಧನ್ಯವಾದಗಳು.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

## ಪಂಚಮಿ ಹಬ್ಬ ತಂದ ಸಂಭ್ರಮ

ಚಂದನದ 'ಥಟ್ ಅಂತ ಹೇಳಿ'ಯಲ್ಲಿ ನಾಗರಪಂಚಮಿ ಅಂಗವಾಗಿ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿತ್ತು. ಅತಿಥಿಗಳಾದ ಗಾಯಿತ್ರಿ ಪ್ರಭಾಕರ್ ಮತ್ತು ರವೀಂದ್ರನಾಥ ಅವರು ಪಂಚಮಿ ಜೊತೆ ರಕ್ಷಾ ಬಂಧನದ ಮಹತ್ವವನ್ನು ಪರಿಚಯಿಸಿದರು. ಇಂತಹ ಸಮಾಜಮುಖಿ ಕಾರ್ಯಕ್ರಮಗಳು ಮೊಬೈಲ್ ಹಾವಳಿಯನ್ನು ಕಡಿಮೆ ಮಾಡಲು ಸಹಕಾರಿ ಆಗುತ್ತವೆ.

—ಕುಬೇರಪ್ಪ ಎಂ. ವಿಭೂತಿ, ಹರಿಹರ

ಚಂದನದ 'ನಾಗರ ಪಂಚಮಿ' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಕಲಾವಿದರಾದ ಕೆ.ಎಸ್. ರವೀಂದ್ರನಾಥ್ ಹಾಗೂ ಗಾಯತ್ರಿ ಪ್ರಭಾಕರ್ ಅವರಿಂದ ಸಾಂಪ್ರದಾಯಿಕ ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವಾಯಿತು. ಅದರಲ್ಲೂ ಸಹೋದರರ ಬೆನ್ನಿಗೆ ಹಾಲು ತುಪ್ಪ ಹಚ್ಚಿ (ಇದಕ್ಕೆ ನಮ್ಮಲ್ಲಿ ಬೆನ್ನು ತೊಳೆದು ಶುಭಕೋರುವುದು ಎನ್ನುತ್ತಾರೆ) ಅಣ್ಣ–ತಮ್ಮ ಚೆನ್ನಾಗಿರಲಿ ಎಂದು ಹರಸುವ ಮೂಲಕ ಬಾಂಧವ್ಯಕ್ಕೆ ಬೆಸುಗೆ ಹಾಕುವ ಸಂಪ್ರದಾಯ ತುಂಬಾ ಇಷ್ಟ ಆಯ್ತು.

—ಕಮಲಾ ಜಿ. ರಾವ್

ಪಂಚಮಿ ಹಬ್ಬದ 'ಥಟ್ ಅಂತ ಹೇಳಿ' ಕಾರ್ಯಕ್ರಮ ವಿಶೇಷವಾಗಿತ್ತು. ಸಹೋದರ–ಸಹೋದರಿಯರ ಬಾಂಧವ್ಯ ಬೆಸುಗೆಯ ಹಬ್ಬದ ಮಹತ್ವ ತಿಳಿಸುವ ಹಲವು ಪ್ರಶ್ನೆಗಳನ್ನು ಕೇಳಿದ್ದರು. ಬಂದ ಅತಿಥಿಗಳೂ ಹಬ್ಬದ ಆಚರಣೆ ವಿಶೇಷ ತಿಳಿಸಿದರು.

—ಭಾರತೀ ಗಂಗಾಧರ್, ಬೆಂಗಳೂರು